



ಕುಮಟಾದ ಕಾಂಚಿಕಾ ಪರಮೇಶ್ವರಿ ಜಾತ್ರೆಯಲ್ಲಿ ನೆರೆದ ಜನಸಮೂಹ

ಚಿತ್ರ: ದಿನೇಶ್ ಮಾನೀರ್

## ಜಾತ್ರೆಗಾಗಿ ಹೊರಬೀಡು!

ಊರೊಳಗೆ ಜಾತ್ರೆ ನಡೆದರೆ, ಅದಕ್ಕೂ ಮುಂಚೆ ಊರಾಚೆ ಹೊರಬೀಡು. ಹೊರಬೀಡೆಂದರೆ ಅರ್ಥ ಇಷ್ಟೆ: ಊರಿನ ಜನರೆಲ್ಲರೂ ಊರಾಚೆಗೆ ಬಂದು ನೆಲೆಸುವುದು.

ಪ್ರತಿ ಮೂರು ವರ್ಷಕ್ಕೊಮ್ಮೆ ನಡೆಯುವ ಯಲ್ಲಾಪುರದ ಗ್ರಾಮದೇವಿ ಜಾತ್ರೆಗೆ ಪೂರ್ವಭಾವಿಯಾಗಿ ಮೂರು ಮಂಗಳವಾರ ಅಲ್ಲಿನ ಜನ ಹೊರಬೀಡು ಆಚರಿಸುತ್ತಾರೆ. ಊರಿಗೆ ಊರೇ ಆ ದಿನಗಳಲ್ಲಿ ಬಂದ್ ಆಗಿರುತ್ತದೆ. ಎಲ್ಲರೂ ಬುತ್ತಿಯೊಂದಿಗೆ ಹೊರಕ್ಕೆ ಬಂದಿರುತ್ತಾರೆ.

ಬೆಳಿಗ್ಗೆಯಿಂದ ಸಂಜೆವರೆಗೆ ಯಾರೂ ಮನೆಯಲ್ಲಿ, ಊರಲ್ಲಿ ಇರುವುದಿಲ್ಲ. ಯಾವುದೇ ಕಾರಣಕ್ಕೂ ಬೀಗ ತೆಗೆಯುವುದಿಲ್ಲ. ಆ ವೇಳೆಯಲ್ಲಿ ದೇವಿಯರು ಮನೆಗಳ ಸುತ್ತ ಸಂಚರಿಸುತ್ತಾರೆ ಎಂಬ ನಂಬಿಕೆಯಿಂದ ಹರಿಶಿಣ, ಕುಂಕುಮವಿಟ್ಟು ದೀಪ ಬೆಳಗಿರುತ್ತಾರೆ. ನಾಲ್ಕನೇ ಮಂಗಳವಾರ ದೇವಿಯರ ಪ್ರತಿಷ್ಠಾಪನೆ, ನಾಲ್ಕನೇ ದಿನ ದೇವಿಯರನ್ನು ಜಾತ್ರೆಯ ಗದ್ದುಗೆಗೆ ಕರೆದೊಯ್ಯುತ್ತಾರೆ.

ಪಾರಿಬೇಲಿ: ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಹಲವು ಹಳ್ಳಿಗಳಲ್ಲಿ ಮೂರು ವರ್ಷಕ್ಕೊಮ್ಮೆ, ಹಗರಿಬೊಮ್ಮನಹಳ್ಳಿಯ ಚಿಂತ್ರಪಳ್ಳಿಯಲ್ಲಿ



ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲ್ಲೂಕಿನ ಉಳವಿ ಚನ್ನಬಸವೇಶ್ವರ ಜಾತ್ರಾ ಮಹೋತ್ಸವಕ್ಕೆ ಬೆಳಗಾವಿ, ವಿಜಯಪುರ, ಬಾಗಲಕೋಟ, ಬೀದರ್‌ಗಳಿಂದಷ್ಟೇ ಅಲ್ಲದೆ ಮಹಾರಾಷ್ಟ್ರ, ಗೋವಾ ಮತ್ತು ಆಂಧ್ರಪ್ರದೇಶಗಳಿಂದಲೂ ಜನರು ಬರುತ್ತಾರೆ.



ಎರಡು ವರ್ಷಗಳಿಗೊಮ್ಮೆ ನಡೆಯುವ ಶಿರಸಿ ಮಾರಿಕಾಂಬಾ ದೇವಿಯ ಜಾತ್ರೆ